**ಶ್ರೀ ಬಿ.ಎಸ್. ಯಡಿಯೂರಪ್ಪ** : ಮಾನ್ಯ ಅಧ್ಯಕ್ಷರೆ, ಸದನ ಸಮಿತಿ ರಚಿಸಲು ನಿಮಗಿರುವ ಅಧಿಕಾರವನ್ನು ಚಲಾಯಿಸಿ ತಾವು ಆದೇಶ ಕೊಡಿ. ಈ ರಾಜ್ಯದ ಜನರ ಹಿತದೃಷ್ಟಿಯಿಂದ ಸದನ ಸಮಿತಿ ರಚಿಸಬೇಕು, ಇದಕ್ಕೆ ಒಪ್ಪಿಗೆ ಕೊಡಿ.

(ಗೊಂದಲ)

**ಅಧ್ಯಕ್ಷರು** : ದಯವಿಟ್ಟು ತಾವು ತಮ್ಮ ತಮ್ಮ ಸ್ಥಾನಗಳಿಗೆ ಹಿಂತಿರುಗಿ ಅಲಂಕರಿಸಬೇಕೆಂದು ಮಾನ್ಯ ಸದಸ್ಯರುಗಳಲ್ಲಿ ಕಳಕಳಿಯ ಮನವಿಮಾಡಿಕೊಳ್ಳುತ್ತೇನೆ.

**ಶ್ರೀ ಜಿ.ವಿ. ರಾಮರೆಡ್ಡಿ** : ಮಾನ್ಯ ಅಧ್ಯಕ್ಷರೆ, ದಯವಿಟ್ಟು ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಬೇಕು.

(ಈ ಹಂತದಲ್ಲಿ ಬಾವಿಯಲ್ಲಿ ಧರಣಿನಿರತರಾಗಿದ್ದ ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು "ಸದನ ಸಮಿತಿ ಬೇಕೇ ಬೇಕು, ಎಂಬ ಘೋಷಣೆಗಳನ್ನು ಕೂಗುತ್ತಿದ್ದರು)

**2. ಮಾನ್ಯ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯ ಪ್ರಸ್ತಾವಕ್ಕೆ ಮುಖ್ಯಮಂತ್ರಿಗಳಿಂದ ಉತ್ತರ,**

**ಅಧ್ಯಕ್ಷರು** : ಈಗ ಮಾನ್ಯ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯ ಪ್ರಸ್ತಾವಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಬೇಕೆಂದು ಕೇಳುತ್ತೇನೆ.

**ಶ್ರೀ ಧರ್ಮಸಿಂಗ್(ಮುಖ್ಯಮಂತ್ರಿ)** : ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಮಾನ್ಯ ಸದಸ್ಯರಾದ ಡಾ; ಜಿ. ಪರಮೇಶ್ವರ್ ಅವರು ಮಾತನಾಡಿ ಸಾಕಷ್ಟು ಬೆಳಕು ಚೆಲ್ಲಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಮೊಟ್ಟಮೊದಲನೆಯದಾಗಿ ಸಮ್ಮಿಶ್ರ ಸರ್ಕಾರ ಹೊರಹೊಮ್ಮಿದೆ. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಏನೇನು ಪ್ರಕಟವಾಗಿದೆ. ಅವೆಲ್ಲವನ್ನೂ ಕೂಡ ಅನುಷ್ಠಾನಕ್ಕೆ ತರುವ ಪ್ರಾಮಾಣಿಕ ಪ್ರಯತ್ನವನ್ನು ಈ ಸರ್ಕಾರ ಮಾಡುತ್ತದೆಂಬ ಮಾತನ್ನು ನಾನು ಹೇಳಬಯಸುತ್ತೇನೆ.

(ಗೊಂದಲ)

ಇವತ್ತು ವಿರೋಧ ಪಕ್ಷದವರು ಈ ರೀತಿ ವರ್ತಿಸಿದರೆ ಹೇಗೆ ? ನಾವು ಇಟ್ಟುಕೊಂಡಿರುವ ಉದ್ದೇಶಗಳ ಗುರಿ ಮುಟ್ಟಬೇಕಾದರೆ ಕರ್ನಾಟಕ ರಾಜ್ಯದಲ್ಲಿ ಪ್ರಪ್ರಥಮವಾಗಿ ಏನು ನಮ್ಮ ಸರ್ಕಾರ ಬಂದಿದೆ. ರಾಜ್ಯದ ಸಮಸ್ಯೆ ಬಗ್ಗೆ ಪ್ರಾಮಾಣಿಕವಾಗಿ ನಿರ್ವಹಣೆ ಮಾಡುವ ರೀತಿಯಲ್ಲಿ ಪ್ರಯತ್ನ ಮಾಡುತ್ತೇವೆ. ಈ ಬಗ್ಗೆ ಇವತ್ತಿನ ದಿವಸ ನಮ್ಮ ಸದನದಲ್ಲಿ ಕೂಡ ರಾಜ್ಯಪಾಲರು ಮಾಡಿರುವ ಸರ್ಕಾರದ ವತಿಯಿಂದ ವಂದನಾ ನಿರ್ಣಯವನ್ನು ತರುತ್ತಿದ್ದೇವೆ.

**ಅಧ್ಯಕ್ಷರು** : ಈಗ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ, "2004ನೇ ಜೂನ್ 11ರಂದು ವಿಧಾನಮಂಡಲದ ಸದಸ್ಯರುಗಳನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನಸಭೆಯ ಸದಸ್ಯರಾದ ನಾವು ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾಗಿ ವಂದನೆಗಳನ್ನು ಸಮರ್ಪಿಸುತ್ತೇವೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

**ಅಧ್ಯಕ್ಷರು** : ಅಂಗೀಕರಿಸಿದ ವಂದನಾ ನಿರ್ಣಯವನ್ನು ಸನ್ಮಾನ್ಯ ರಾಜ್ಯಪಾಲರಿಗೆ ಕಳುಹಿಸಿಕೊಡಲಾಗುವುದು.

**3. ಚುನಾವಣಾ ಪ್ರಸ್ತಾವ**

**ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)** : ಮಾನ್ಯ ಅಧ್ಯಕ್ಷರೇ "ದಿನಾಂಕ 14ನೇ ಜೂನ್ 2004ರಂದು ಕರ್ನಾಟಕ ವಿಧಾನಮಂಡಲದ ವಿವಿಧ ಸ್ಥಾಯಿ ಸಮಿತಿಗಳಿಗೆ ಹಾಗೂ ಅನಾಥಾಲಯ ಮತ್ತು ಧರ್ಮ ಸಂಸ್ಥೆಗಳು (ಮೇಲ್ವಿಚಾರಣೆ ಮತ್ತು ನಿಯಂತ್ರಣ) ಮಂಡಳಿಗೆ ಚುನಾವಣಾ ಪ್ರಸ್ತಾವವನ್ನು ಮಂಡಿಸಿದ್ದು ಚುನಾವಣಾ ಕಾರ್ಯಕ್ರಮ ವೇಳಾಪಟ್ಟಿಯನ್ನು ಹೊರಡಿಸಲಾಗಿರುತ್ತದೆ. ಈ ಕುರಿತು ವಿವಿಧ ಪಕ್ಷಗಳ ಸಚೇತಕರುಗಳು ನೀಡಿರುವ ಒಡಂಬಡಿಕೆ ಪಟ್ಟಿಯ ರೀತ್ಯಾ ಮಾನ್ಯ ವಿಧಾನಸಭೆ ಸದಸ್ಯರುಗಳನ್ನೊಳಗೊಂಡ ವಿವಿಧ ಸಮಿತಿಗಳನ್ನು ರಚಿಸಲು ಹಾಗೂ ಅನಾಥಾಲಯ ಮತ್ತು ಧರ್ಮ ಸಂಸ್ಥೆಗಳು (ಮೇಲ್ವಿಚಾರಣೆ ಮತ್ತು ನಿಯಂತ್ರಣ) ಮಂಡಳಿಗೆ ಮಾನ್ಯ ಸದಸ್ಯರನ್ನು ನೇಮಿಸಲು ಮಾನು ವಿಧಾನ ಸಭಾಧ್ಯಕ್ಷರಿಗೆ ಅಧಿಕಾರವನ್ನು ಈ ಸದನವು ನೀಡುತ್ತದೆ."

**ಅಧ್ಯಕ್ಷರು** : ಪ್ರಸ್ತಾವ ಏನೆಂದರೆ, " ದಿನಾಂಕ 14ನೇ ಜೂನ್ 2004ರಂದು ಕರ್ನಾಟಕ ವಿಧಾನಮಂಡಲದ ವಿವಿಧ ಸ್ಥಾಯಿ ಸಮಿತಿಗಳಿಗೆ ಹಾಗೂ ಅನಾಥಾಲಯ ಮತ್ತು ಧರ್ಮ ಸಂಸ್ಥೆಗಳು (ಮೇಲ್ವಿಚಾರಣೆ ಮತ್ತು ನಿಯಂತ್ರಣ) ಮಂಡಳಿಗೆ ಚುನಾವಣಾ ಪ್ರಸ್ತಾವವನ್ನು ಮಂಡಿಸಿದ್ದು ಚುನಾವಣಾ ಕಾರ್ಯಕ್ರಮ ವೇಳಾಪಟ್ಟಿಯನ್ನು ಹೊರಡಿಸಲಾಗಿರುತ್ತದೆ. ಈ ಕುರಿತು ವಿವಿಧ ಪಕ್ಷಗಳ ಸಚೇತಕರುಗಳು ನೀಡಿರುವ ಒಡಂಬಡಿಕೆ ಪಟ್ಟಿಯ ರೀತ್ಯಾ ಮಾನ್ಯ ವಿಧಾನಸಭೆ ಸದಸ್ಯರುಗಳನ್ನೊಳಗೊಂಡ ವಿವಿಧ ಸಮಿತಿಗಳನ್ನು ರಚಿಸಲು ಹಾಗೂ ಅನಾಥಾಲಯ ಮತ್ತು ಧರ್ಮ ಸಂಸ್ಥೆಗಳು (ಮೇಲ್ವಿಚಾರಣೆ ಮತ್ತು ನಿಯಂತ್ರಣ) ಮಂಡಳಿಗೆ ಮಾನ್ಯ ಸದಸ್ಯರನ್ನು ನೇಮಿಸಲು ಮಾನ್ಯ ವಿಧಾನ ಸಭಾಧ್ಯಕ್ಷರಿಗೆ ಅಧಿಕಾರವನ್ನು ಈ ಸದನವು ನೀಡುತ್ತದೆ",

(ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು)

**4. ಸಚಿವರ ಹೇಳಿಕೆ.**

ಜೂನ್ 2004 ರಿಂದ ಆಗಸ್ಟ್-2004 ರ ಮುಂಗಾರಿನ ಅವಧಿಯಲ್ಲಿ ವಿದ್ಯುತ್ ಬಳಕೆಯನ್ನು ಹೆಚ್ಚುಸುವುದರ ಬಗ್ಗ ಲೋಕೋಪಯೋಗಿ ಹಾಗೂ ವಿದ್ಯುತ್ ಸಚಿವರ ಹೇಳಿಕೆ

**ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಸಚಿವರು)** : ಮಾನ್ಯ ಅಧ್ಯಕ್ಷರೆ, 2004ರ ಮಾರ್ಚ್ ತಿಂಗಳಿನಲ್ಲಿ ರಾಜ್ಯದ ವಿದ್ಯುತ್ ಬೇಡಿಕೆಯ ಶೃಂಗಕ್ಕೇರಿ 100 ದಶಲಕ್ಷಯೂನಿಟ್ಟುಗಳಿಗೆ (ದ.ಲ.ಯೂ.) ಏರಿತು. ತರುವಾಯ ಈ ಬೇಡಿಕೆಯ 92 ದ.ಲ.ಯೂ ಗಳಿಗೆ ಇಳಿಯಿತು. ಮೇ ತಿಂಗಳಿನಲ್ಲಿ ಒಳ್ಳೆಯ ಮಳೆಯಾಯಿತು ಮತ್ತು ಇದು ಈ ತಿಂಗಳಿನಲ್ಲಿಯೂ ಮುಂದುವರೆದಿದೆ. ವಿದ್ಯುತ್